## ನಳ ನಳಿಸುತ್ತಿರುವ ನರ್ಸರಿಗಳು

# ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಗೆ 91 ಸಾವಿರ ಗಿಡಗಳು ಸಿದ್ಧ



### ಸದುಪಯೋಗವಾಗಬೇಕು

ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಡಿ ಸಾರ್ವಜನಿಕರಿಗೆ ರಿಯಾಯಿತಿ ದರದಲ್ಲಿ ನೀಡಲು ಗಿಡಗಳು ನರ್ಸರಿಗಳಲ್ಲಿ ಸಿದ್ಧಗೊಂಡಿವೆ. ಮಳೆಗಾಲ ಆರಂಭವಾದ ತಕ್ಷಣವೇ ವಿತರಣೆಯಾಗುತ್ತವೆ. ಈ ಗಿಡಗಳನ್ನು ನೆಟ್ಟು, ಪೋಷಿಸಿ ಯೋಜನೆಯ ಸದುಪಯೋಗಪಡಿಸಿಕೊಳ್ಳಬೇಕು.

➢ ವಸಂತ್ ರೆಡ್ಡಿ, ಡಿಸಿಎಫ್ ಕಾರವಾರ ವಿಭಾಗ



ಕಾರವಾರ: ಮಳೆಗಾಲ ಆರಂಭಗೊಳ್ಳುತ್ತಿದ್ದಂತೆಯೇ ಸಾರ್ವಜನಿಕರಿಗೆ ರಿಯಾಯಿತಿ ದರದಲ್ಲಿ ಅರಣ್ಯ ಇಲಾಖೆ ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಡಿ ನೀಡುವ ಗಿಡಗಳು ಅರಣ್ಯ ಇಲಾಖೆಯ ನರ್ಸರಿಗಳಲ್ಲಿ ಬೆಳೆದು ನಿಂತಿವೆ.

ಕಾರವಾರ ಉಪವಿಭಾಗದಲ್ಲಿ 91 ಸಾವಿರ ಗಿಡಗಳು ವಿತರಣೆಗೆ ಸಿದ್ಧಗೊಂಡಿವೆ. ಇವುಗಳ ವಿತರಣೆ ಕಾರ್ಯ ಸದ್ಯದಲ್ಲಿಯೇ ಆರಂಭಗೊಳ್ಳಲಿವೆ. ಸಾರ್ವಜನಿಕರಿಂದ ಆಯಾ ಅರಣ್ಯ ವಲಯಗಳಲ್ಲಿ ಅರ್ಜಿ ಮತ್ತು ಪಹಣಿ ಪತ್ರಿಕೆ ಪಡೆದುಕೊಂಡು ತದನಂತರ ರಿಯಾಯಿತಿ ದರದಲ್ಲಿ ಗಿಡ ನೀಡಲಾಗುತ್ತದೆ. ರೈತರು ಮತ್ತು ಸಾರ್ವಜನಿಕರು ಗಿಡಗಳನ್ನು ಪಡೆದುಕೊಂಡು ತಮಗೆ ಸೇರಿದ ಜಾಗದಲ್ಲಿ ನೆಟ್ಟು ಪೋಷಿಸಬೇಕು. ಈ ಗಿಡಗಳಿಗೆ ಮೊದಲ ಮೂರು ವರ್ಷಕ್ಕೆ ಸಹಾಯಧನವನ್ನೂ ಇಲಾಖೆಯಿಂದ ನೀಡಲಾಗುತ್ತದೆ. ವರ್ಷದಿಂದ ವರ್ಷಕ್ಕೆ ಯೋಜನೆಯಡಿ ಗಿಡ ಪಡೆದುಕೊಳ್ಳುವವರ ಸಂಖ್ಯೆಯೂ ವೃದ್ಧಿಸುತ್ತಿದೆ ಎಂಬುದು ಅರಣ್ಯಾಧಿಕಾರಿಗಳ ಅಭಿಪ್ರಾಯ.

ಕೃಷಿ ಜೊತೆಗೆ ಅರಣ್ಯೀಕರಣವನ್ನೂ ವೃದ್ಧಿಸಲು ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆ ಜಾರಿಗೊಳಿಸಲಾಗಿದೆ. ರೈತರು, ಇನ್ನಿತರ ಸಾರ್ವಜನಿಕರು ಗಿಡ ನೆಡುವ ಜೊತೆಗೆ ಅವುಗಳಿಂದ ಜೀವನೋಪಾಯಕ್ಕೆ ಉಪಬೆಳೆ ಪಡೆಯುವಂತಾಗಲಿ ಎಂದು ಹೆಚ್ಚಾಗಿ ಹಣ್ಣು ಮತ್ತಿತರ ಉಪಬೆಳೆ ನೀಡುವ ಗಿಡ ನೀಡಲಾಗುತ್ತದೆ. ಕೃಷಿ ಭೂಮಿಯಲ್ಲೂ ನೆಡಬಲ್ಲ ಗಿಡಗಳಾದ ತೇಗ, ಮಾವು, ಹಲಸು, ನೆಲ್ಲಿ, ಗೇರು, ಶ್ರೀಗಂಧ, ಅಶೋಕಾ, ಬಿಲ್ವಪತ್ರೆ ಗಿಡಗಳನ್ನು ಪೂರೈಸಲಾಗುತ್ತದೆ. ಕಾರವಾರ ವಿಭಾಗದ 6 ನರ್ಸರಿಗಳಲ್ಲಿ ಗಿಡಗಳನ್ನು ಡಿಸೆಂಬರ್ ಅಂತ್ಯದಿಂದಲೇ ಬೆಳೆಸಲಾಗುತ್ತಿದೆ. ಯೋಜನೆಯಡಿ ಪಡೆದ ಗಿಡಗಳನ್ನು ನೆಡುವ ವ್ಯಕ್ತಿ ಸಸಿಯನ್ನು ಉತ್ತಮ ರೀತಿಯಲ್ಲಿ ಆರೈಕೆ ಮಾಡಿದರೆ ಮೊದಲ ವರ್ಷಕ್ಕೆ 30 ರು., ಎರಡನೇ ವರ್ಷಕ್ಕೆ 30 ರು. ಮತ್ತು ಮೂರನೇ ವರ್ಷದ ಅಂತ್ಯಕ್ಕೆ 40 ರು.ಗಳನ್ನು ಸಹಾಯಧನವಾಗಿ ನೀಡಲಾಗುತ್ತದೆ ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ವಸಂತ ರೆಡ್ಡಿ ತಿಳಿಸಿದರು.



### ಮುಖ್ಯಾಂಶಗಳು

- ಕಾರವಾರ ವಿಭಾಗದ 6 ನರ್ಸರಿಗಳಲ್ಲಿ ಗಿಡಗಳ ಪೋಷಣೆ
- 91 ಸಾವಿರ ಗಿಡಗಳು ವಿತರಣೆಗೆ ಸಿದ್ಧ
- ಗಿಡ ಪೋಷಿಸಿದರೆ ಮೊದಲ ಮೂರು ವರ್ಷ 100 ರು. ಸಹಾಯಧನ
- ಉಪಬೆಳೆ ನೀಡುವ ಗಿಡಗಳ ವಿತರಣೆ
- ನೀರಿಲ್ಲದಿದ್ದರೂ ಶ್ರಮಪಟ್ಟು ಆರೈಕೆ ಮಾಡುತ್ತಿರುವ ಸಿಬ್ಬಂದಿ

### ನಳ ನಳಿಸುವ ನರ್ಸರಿಗಳು

ಅರಣ್ಯ ಇಲಾಖೆಯ ನರ್ಸರಿಗಳಲ್ಲಿ ಈಗ ಹಸಿರು ಹೊದ್ದ ಗಿಡಗಳ ರಾಶಿಯೇ ಕಂಡುಬರುತ್ತಿದೆ. ಕಳೆದ ಡಿಸೆಂಬರ್‌ನಿಂದ ಆರೈಕೆಗೊಳ್ಳುತ್ತಿದ್ದ ಗಿಡಗಳು ಆಳೆತ್ತರಕ್ಕೆ ಬೆಳೆದು ನಿಂತಿವೆ. ಇವುಗಳಲ್ಲಿ ಕೃಷಿ ಅರಣ್ಯ ಯೋಜನೆಯಡಿ ಸಾರ್ವಜನಿಕರಿಗೆ ನೀಡುವ ಗಿಡಗಳ ಜೊತೆಗೆ ಅರಣ್ಯ ಇಲಾಖೆ ಅರಣ್ಯೀಕರಣದ ಸಲುವಾಗಿ ನೆಡುವ ಕಾಡುಗಿಡಗಳೂ ಇವೆ. ಸಿಬ್ಬಂದಿಗಳು ನೀರು, ಗೊಬ್ಬರ ಕಾಲಕಾಲಕ್ಕೆ ನೀಡಿ ಗಿಡಗಳನ್ನು ಬೆಳೆಸಿದ್ದಾರೆ. ಕೆಲವೆಡೆ ನೀರಿನ ಸಮಸ್ಯೆಯೂ ಕಂಡುಬಂದಿದೆ. ಆದಾಗ್ಯೂ ಗಿಡಗಳಿಗೆ ನೀರು ಕಡಿಮೆಯಾಗದಂತೆ ಹರಸಾಹಸಪಟ್ಟು ದೂರದ ಪ್ರದೇಶದಿಂದ ತಂದು ನೀರು ಒದಗಿಸಲಾಗುತ್ತಿದೆ.